Sri A. G. RAMACHANDRA RAO.—I do not say that it is not. On all aspects of questions regarding the State, we consult them and they are bound to respond.

High Schools recommended for conversion into Multi-purpose High Schools.

Q.—21. **Sri S. KARIYAPPA** (Kanakapura).—

Will the Government be pleased to state :—

(*a*) the names of High Schools recommended for conversion into the proposed Multi-purpose High Schools ;

(*b*) the points that were taken into consideration while recommending conversion of those High Schools ;

(*c*) the probable date when the proposed conversion will come into effect ?

A.—**Sri A. G. RAMACHANDRA RAO** (Minister for Law and Education).—

(*a*), (*b*) and (*c*) The matter is under consideration of Government.

ಶ್ರೀ ಎಸ್. ಕರಿಯಪ್ಪ.—ಈ ಮಲ್ಟಿಪರ್‌ಪಸ್ ಹೈಸ್ಕೂಲುಗಳನ್ನು ಯಾವಾಗಿನಿಂದ ಪ್ರಾರಂಭ ಮಾಡಬೇಕೆಂದಿದ್ದೀರಿ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೂ ತೀರ್ಮಾನ ಮಾಡಿಲ್ಲ ; ಕೇಂದ್ರ ಸರ್ಕಾರದೊಡನೆ ಈ ವಿಚಾರದಲ್ಲಿ ಪತ್ರ ವ್ಯವಹಾರ ನಡೆಸುತ್ತಿದ್ದೇವೆ.

ಶ್ರೀ ಎಸ್. ಕರಿಯಪ್ಪ.—ಇವನ್ನು ಮುಂದಿನ ಡಿಸೆಂಬರ್ ತಿಂಗಳಿನಿಂದ ಪ್ರಾರಂಭ ಮಾಡಬೇಕೆಂಬ ಉದ್ದೇಶ ವಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—Academic yearನಿಂದ ಮಾಡುವುದು ನೂಕ್ತವೆಂದು ಕಾಣುತ್ತದೆ.

ಶ್ರೀ ಎಸ್. ಕರಿಯಪ್ಪ.—ಮಲ್ಟಿ ಪರ್‌ಪಸ್ ಹೈಸ್ಕೂಲುಗಳಲ್ಲಿ ಮುಖ್ಯವಾಗಿ ಯಾವ ಯಾವ ವಿಷಯಗಳನ್ನ ಬೋಧಿಸಬೇಕೆಂದು ನಿರ್ಧಾರಮಾಡಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್ —ಅನೇಕವಾಗಿರ ತಕ್ಕ ಕೈಗಾರಿಕೆಗಳನ್ನು ಕಲಸಿಕೊಡುವ ಪಠ್ಯ ಪುಸ್ತಕಗಳನ್ನು ಏರ್ಪಾಡು ಮಾಡಬೇಕೆಂಬ ಉದ್ದೇಶವಿದೆ.

ಶ್ರೀ ಎಸ್. ಕರಿಯಪ್ಪ.—ಮುಖ್ಯವಾಗಿ ಯಾವ ಕೈಗಾರಿಕೆಗಳನ್ನು ಹೇಳಿ ಕೊಡಬೇಕೆಂದು ಆಲೋಚನೆ ಮಾಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ, ಬೇಕಾದರೆ ಅದನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—It goes far beyond the scope of the question.

ಶ್ರೀ ಎಸ್. ಕರಿಯಪ್ಪ.—ವ್ಯವಸಾಯ ಮುಖ್ಯ ಬೋಧಕ ವಿಷಯವಾಗಬೇಕು, ಅದರ ಜೊತೆಗೆ ಇನ್ನೂ ಎರಡು ವಿಷಯಗಳನ್ನು ಬೋಧಿಸಬೇಕೆಂಬುದು ಕೇಂದ್ರ ಸರ್ಕಾರದವರ ಅಭಿಪ್ರಾಯವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವ್ಯವಸಾಯ ಹೆಚ್ಚು ವ್ಯಾಪ್ತಿ ಉಳ್ಳದ್ದು ಮತ್ತು ಮುಖ್ಯವಾದುದು, ಇದೂ ಒಂದು ಕಸಬೆಂದ ಪರಿಗಣಿಸುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಈ ಶಾಲೆಗಳಲ್ಲಿ ಬಹು ಭಾಗವನ್ನು ಪಟ್ಟಣಗಳಲ್ಲಿ ಪ್ರಾರಂಭ ಮಾಡಬೇಕೆಂದು ಉದ್ದೇಶ ಪಟ್ಟಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆರೀತಿ ಉದ್ದೇಶಪಟ್ಟಿಲ್ಲ, ಇನ್ನೂ ಪರಿಶೀಲನೆ ಮಾಡುತ್ತಿದ್ದೇವೆ.

Sri G. DUGGAPPA.—May I know whether Government could select any private high schools in the State for being recommended to be converted into Multi-purpose Schools ?

Sri A. G. RAMACHANDRA RAO.—That is also under consideration.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರಾರಂಭ ಮಾಡುವುದಕ್ಕೆ ಕೇಂದ್ರ ಸರ್ಕಾರದೊಡನೆ ಪರ್ಯಾಲೋಚನೆ ಮಾಡುತ್ತಿದ್ದೇವೆಂದು ಹೇಳಿದಿರಿ. ಇದು ಎಷ್ಟು ದಿವಸಗಳಲ್ಲಿ ತೀರ್ಮಾನವಾಗುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದಷ್ಟು ಜಾಗ್ರತೆ ತೀರ್ಮಾನ ಮಾಡಬೇಕೆಂದಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪಟ್ಟಣಗಳಲ್ಲಿ ಮಲ್ಟಿ ಪರ್‌ಪಸ್ ಹೈಸ್ಕೂಲುಗಳನ್ನು ಆರಂಭಿಸಬೇಕೆಂಬ ಉದ್ದೇಶವಿದೆ ಎಂದು ಹೇಳಿದಿರಿ. ಇದನ್ನು ಕಾರ್ಯಗತ ಮಾಡುವುದಕ್ಕೆ ಯಾವ ಯಾವ ಕೈಗಾರಿಕೆಗಳನ್ನು ಅಳವಡಿಸಬೇಕೆಂದು ಯೋಚನೆಯಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಯಾ ಸ್ಥಳಗಳಿಗನುಗುಣವಾದ ಕೈಗಾರಿಕೆಗಳನ್ನು ಜುನಾಯಿಸುತ್ತೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಂಥ ಒಂದು ಯೋಜನೆಯನ್ನು ತಯಾರಿಸಿರುವುದನ್ನು ಈ ಮಾನ್ಯ ಸಭೆಯ ಮುಂದಿಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಯೋಜನೆಯನ್ನು ತಯಾರಿಸಿರುವುದು ನಾವಲ್ಲ ; ಎಜ್ಯುಕ್ಷೇರ್ಷನ್ ರಿಫಾರಮ್ಸ್ ಕಮಿಟಿ ಮತ್ತು ಸೆಂಟ್ರಲ್ ಎಜ್ಯುಕೇರ್ಷನ್ ಮಿನಿಸ್ಟ್ರಿಯವರು ತಯಾರು ಮಾಡಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಸಭೆಯ ಮಾನ್ಯ ಸದಸ್ಯರಿಗೆ ಈ ಯೋಜನೆಯ ವಿವರಗಳನ್ನು ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದು ನೋಟ್ ಕೊಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಪ್ರತಿ ಜಿಲ್ಲೆಯಲ್ಲಿಯೂ ಇಂಥ ಹೈಸ್ಕೂಲುಗಳನ್ನು ಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದಷ್ಟು ಜಾಸ್ತಿ ವ್ಯಾಪ್ತಿಯಲ್ಲಿ ಮಾಡಬೇಕೆಂದು ಯೋಚನೆ ಇದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೂ ಖಚಿತವಾಗಿ ಗೊತ್ತಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಈ ಹೈಸ್ಕೂಲುಗಳನ್ನು ಸರ್ಕಾರದವರೇ ನೇರವಾಗಿ ಏರ್ಪಾಡು ಮಾಡುತ್ತಾ

ರೆಯೋ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಂದ ಶಿಫಾರಸುಗಳನ್ನು ತರಿಸಿಕೊಂಡು ಮಾಡುತ್ತಾರೆಯೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲಾಖೆಯಿಂದ ಶಿಫಾರಸುಗಳನ್ನು ತರಿಸಿ ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡಸುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಯಾವ ಯಾವ ಸ್ಕೂಲುಗಳನ್ನು ಮಲ್ಟಿ ಪರ್‌ಪಸ್ ಸ್ಕೂಲುಗಳಾಗಿ ಪರಿವರ್ತಿಸಬೇಕೆಂಬ ಬಗ್ಗೆ ಸಂಬಂಧಪಟ್ಟ ಯಾವ ಅಧಿಕಾರಿಗಳಿಂದ ಶಿಫಾರಸನ್ನು ತರಿಸಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ತರಿಸಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಆ ಪಟ್ಟಿಯನ್ನು ಸಭೆಯು ಮುಂದಿಡಲು ಸಾಧ್ಯವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನುಮೇಲೆ ಮಾಡಬೇಕು. Not at this stage.

Sri T. MARIAPPA.—Is it not a fact that the Government of India wish to convert a High School in each District into a Multi-purpose High School ?

Sri A. G. RAMACHANDRA RAO.—That is one of their proposals.

Works Committees in Industries.

Q.—38. Sri B. MADHAVACHAR (Bhadravathi).—

Will the Government be pleased to state :—

(*a*) the names of industries where Works Committees have been constituted as enumerated in the Industrial Disputes Act, 1947 ;

(*b*) whether they are in possession of the proceedings of these Works Committees ?

A.—Sri A. G. RAMACHANDRA RAO (Minister for Law and Education).—

(*a*) The following factories have constituted Works Committees as required under Section 3 of the Industrial Disputes Act, 1947 :—

1 Mysore Spun Silk Mills, Ltd., Channapatna.
2 Sri Krishna Weaving Mills, Subramanyapuram, Bangalore.
3 Bangalore Transport Co., Ltd.
4 Mysore Government Road Transport, Bangalore.
5 Hindustan Aircraft, Ltd.
6 Tobacco Manufacturers (India), Ltd.
7 Government Porcelain Factory, Malleswaram.
8 Mysore Glass and Enamel Works.
9 Sri Krishnarajendra Mills, Ltd., Mysore.
10 Mysore Silk Filatures, T.-Narasipar.
11 Mysore Silk Filatures, Mysore.
12 Hunsur Coffee Curing and Roasting.
13 Mysore Chemicals and Fertilisers.
14 Davangere Cotton Mills.
15 Sri Shankara Textile Mills, Davangere.
16 Sri Ganesar Textile Mills, Harihar.
17 Mysore Paper Mills, Ltd., Bhadravati.
18 Mysore Implements Factory, Hassan.
19 Kadamane Estate.
20 The Mysore Tobacco Co., Ltd.

(*b*) No.

Sri B. MADHAVACHAR.—Is it not a fact that in many of the industrial concerns where these Works Committees are constituted, they are not functioning properly ?

*Sri A. G. RAMACHANDRA RAO.—We have not received any information to that effect.

Sri B. MADHAVACHAR.—Will it not be desirable to obtain periodical reports of the proceedings of these Works Committees either from the Labour Department or from the Government ?

Sri A. G. RAMACHANDRA RAO.—There is no obligation to do that, but the Committees are working satisfactorily.

Sri B. MADHAVACHAR.—Will the Government direct other Industrial concerns to constitute Works Committees so that better understanding could be effected between the Labour and the Management ?

Sri A. G. RAMACHANDRA RAO.—Yes, Sir, we have been trying to persuade them to start Works Committees.

ಶ್ರೀ ಆರ್. ಅನಂತರಾಮ್.—ಸರ್ಕಾರಿ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ವರ್ಕ್ಸ್ ಕಮಿಟಿಯನ್ನೇಕೆ ಮಾಡಿಲ್ಲ ?